

بسم اللهِ الرّحمٰن الرّحیم

# ಮುಸ್ಲಿಮರು ಪಂಗಡಗಳಾಗಿ ವಿಭಜಿಸುವುದಕ್ಕೆ ಬದಲಾಗಿ ಒಂದೇ ಸಮುದಾಯವಾಗಿ ಅಲ್ಲಾಹನ ಕೈಯಿಂದಲೇ ನೆಡಲ್ಪಟ್ಟ ಮಹ್‌ದೀ ಮಸೀಹರ ಜಮಾಅತ್‌ನಲ್ಲಿ ಜಮಾಯಿಸಬೇಕು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ**03-04-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ದಿನ ತನ್ನ ಸ್ನೇಹಿತರೊಂದಿಗೆ ವಾಯು ವಿಹಾರಕ್ಕೆ ಹೋದಾಗ ಮಾರ್ಗದಲ್ಲಿ, ಅಲ್ಲಾಹನ ಸಹಾಯ ಮತ್ತು ಅನುಗ್ರಹಗಳ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆ ಹೇಳಿದರು: "ಅಲ್ಲಾಹನು ಸತ್ಯವನ್ನು ಬೆಳಗಿಸಲು ಮತ್ತು ನಮ್ಮ ಜಮಾಅತಿಗೆ ನೆರವು ನೀಡಲು ಎಷ್ಟು ಹೆಚ್ಚು ಹೆಚ್ಚಾಗಿ ಪ್ರಯತ್ನಿಸುತ್ತಿದ್ದಾನೆ. ಹೀಗಿದ್ದರೂ ನಮ್ಮ ವಿರೋಧಿಗಳ ಕಣ್ಣು ತೆರೆಯುವುದಿಲ್ಲ. ಒಬ್ಬ ಶತ್ರು ನನಗೆ ಒಮ್ಮೆ ಹೀಗೆ ಬರೆದರು– ನಿಮ್ಮನ್ನು ವಿರೋಧಿಸುವ ಕೆಲಸದಲ್ಲಿ ಜನರು ಯಾವ ಕೊರತೆಯನ್ನೂ ಮಾಡಲಿಲ್ಲ. ಆದರೆ ಒಂದು ಪ್ರಶ್ನೆಗೆ ಉತ್ತರ ನಮಗೆ ತಿಳಿಯುವುದಿಲ್ಲ. ಇಷ್ಟೆಲ್ಲಾ ನಿಮ್ಮನ್ನು ವಿರೋಧಿಸುತ್ತಾ ಇದ್ದರೂ ನೀವು ಪ್ರತಿಯೊಂದು ವಿಷಯದಲ್ಲಿ ಜಯವನ್ನೇ ಗಳಿಸುತ್ತಿರುವಿರಿ."

ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಮಾಡಿದ ವಾಗ್ದಾನಗಳ ಪ್ರಕಾರ ಅದರ ಪರಿಣಾಮಗಳು ಅವರ ಕಾಲದಲ್ಲಿಯೂ ಕಾಣಿಸಿಕೊಂಡವು. ಅವರ ಕಾಲದಲ್ಲಿ ಮಾತ್ರವಲ್ಲ ಈಗ ಸಹ ಶತ್ರುಗಳು ವಿರೋಧವನ್ನು ತೀವ್ರವಾಗಿ ಪ್ರಕಟಿಸುತ್ತಿದ್ದಾರೆ. ಆದರೆ ಈ ಜಮಾಅತ್ ಅಲ್ಲಾಹನ ಅನುಗ್ರಹದಿಂದ ವೃದ್ಧಿಗೊಳ್ಳುತ್ತಾ ಹೋಗುತ್ತಿದೆ. ಲೋಕದಲ್ಲಿ ಯಾವುದಾದರೊಂದು ಪ್ರದೇಶದಲ್ಲಿ ಅಹ್ಮದಿಯರನ್ನು ಅದುಮಿ ಹಾಕಲು ಅಥವಾ ಕೊನೆಗೊಳಿಸಲು ಶತ್ರುಗಳು ಪ್ರಯತ್ನ ಮಾಡಿದಾಗಲೆಲ್ಲಾ ಅಲ್ಲಾಹನು ಆ ದೇಶಗಳಲ್ಲಿ ಅಹ್ಮದಿಯರ ಬಲಿದಾನದ ಮಟ್ಟವನ್ನು ವರ್ಧಿಸಿದನು ಮತ್ತು ಆಗ ಲೋಕದ ಇತರ ದೇಶಗಳಲ್ಲಿ ಅಲ್ಲಾಹನು ಅಹ್ಮದಿಯಾ ಜಮಾಅತಿನ ಅಭಿವೃದ್ಧಿಗೋಸ್ಕರ ಮಾರ್ಗಗಳನ್ನು ಸ್ವತಃ ತೆರೆದುಕೊಟ್ಟನು. ಅಲ್ಲೆಲ್ಲ ಕೇವಲ ನಾವು ನಮ್ಮ ಸ್ವಂತ ಪ್ರಯತ್ನದಿಂದ ತಬ್ಲೀಗ್ ಕೇಂದ್ರಗಳನ್ನು ತೆರೆಯಲು ಪ್ರಯತ್ನಿಸುತ್ತಿದ್ದರೆ ನಮಗೆ ಜಯಲಭಿಸುತ್ತಿರಲಿಲ್ಲ. ಅಹ್ಮದಿಯ್ಯತ್ ಅಲ್ಲಾಹನ ಕೈಯಿಂದ ನೆಡಲ್ಪಟ್ಟ ಒಂದು ಗಿಡವಾಗಿದೆ ಎನ್ನುವುದರ ಬಗ್ಗೆ ಯಾವ ಸಂಶಯವೂ ಇಲ್ಲ. ಅದು ಅಲ್ಲಾಹನ ವಾಗ್ದಾನ ಪ್ರಕಾರ ಮರವಾಗಿ ಬೆಳೆದು ಫಲಪುಷ್ಪಗಳನ್ನು ನೀಡುವುದು– ಇನ್‌ಶಾಅಲ್ಲಾಹ್.

ಈಗ ನಾನು ಅಲ್ಲಾಹನು ಈ ಕಾಲದಲ್ಲಿ ನೀಡಿದ ಅನುಗ್ರಹಗಳ ಕೆಲವು ಘಟನೆಗಳನ್ನು ವಿವರಿಸುವೆನು. ಅಲ್ಲಾಹನು ಹೇಗೆ ಜನರ ಹೃದಯಗಳನ್ನು ತೆರೆಯುತ್ತಾನೆ. ಅವರಿಗೆ ಅಹ್ಮದಿಯ್ಯತ್ತಿನ ಸಂದೇಶ ಹೇಗೆ ತಲಪುತ್ತದೆ ಎಂದು ಅವುಗಳಿಂದ ತಿಳಿದುಕೊಳ್ಳಬಹುದು.

ನೈಜೀರಿಯಾ ದೇಶದ ನಮ್ಮ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ: ಒಂದು ತಬ್ಲೀಗ್ ಪ್ರಯಾಣದ ಸಂದರ್ಭದಲ್ಲಿ ಒಂದು ಮಣ್ಣು ರಸ್ತೆ ಮೂಲಕ ನಡೆಯುತ್ತಾ ತಬ್ಲೀಗ್ ಮಾಡುತ್ತಾ ಮುಂದುವರಿದೆವು. ಮೂರು ದಿನಗಳ ನಂತರ ಇದೇ ಮಾರ್ಗದಲ್ಲಿ ಹಿಂದಕ್ಕೆ ಬರುವಾಗ ಒಂದು ಊರಿನ ಜನರು ನಮ್ಮನ್ನು ತಡೆದು ನಿಲ್ಲಿಸಿ ಹೇಳಿದರು: ನಾವು ನಿಮ್ಮ ಆಗಮನವನ್ನು ಪ್ರತೀಕ್ಷಿಸುತ್ತಾ ಕುಳಿತಿದ್ದೇವೆ. ನೀವು ನಮ್ಮ ಊರಿನ ಇಮಾಮರ ಬಳಿಗೆ ಬನ್ನಿರಿ ಎಂದು ಹೇಳಿದರು. ನಾವು ಆ ಊರಿನ ಇಮಾಮರ ಬಳಿಗೆ ಹೋದಾಗ ಅವರು ಹೇಳಿದರು– ಅಹ್ಮದಿಯಾ ಜಮಾಅತ್ ಸತ್ಯ ಎನ್ನುವುದರ ಬಗ್ಗೆ ನಮಗೆ ಯಾವ ಸಂಶಯವೂ ಉಳಿದಿಲ್ಲ. ಅಲ್ಲಾಹನು ನಮಗೆ ಇದರ ಬಗ್ಗೆ ತೃಪ್ತಿ ನೀಡಿರುವನು. ಅಲ್ಲಾಹನು ಅವರನ್ನು ತೃಪ್ತಿ ಪಡಿಸಿದುದು ಹೇಗೆ ಎಂಬುದನ್ನು ವಿವರಿಸುತ್ತಾ ಅವರು ಹೇಳಿದರು: ನೀವು ಇಲ್ಲಿಗೆ ಬಂದು ಹೋದ ನಂತರ ಮಾರಾವಿ ನಗರದ ವಹ್ಹಾಬಿಗಳ ದೊಡ್ಡ ಇಮಾಮ್ ಸಾಹೇಬರು ಅವರ ಸಂಗಡಿಗರೊಂದಿಗೆ ಇಲ್ಲಿಗೆ ಬಂದು ಹೇಳಿದರು: ಅಹ್ಮದಿಯರು ಕಾಫಿರರಾಗಿದ್ದಾರೆ. ಅವರು ನಿಮ್ಮ ಮಸ್‌ಜಿದ್‌ಗೆ ಪ್ರವೇಶಿಸಲು ಮತ್ತು ತಬ್ಲೀಗ್ ಮಾಡಲು ನೀವು ಅನುಮತಿ ನೀಡಿದುದು ಏಕೆ? ಎಂದು ಕೇಳಿದರು. ಆಗ ಆ ಊರಿನ ಇಮಾಮ್ ಸಾಹೇಬರು ಅವರೊಂದಿಗೆ ಹೇಳಿದರು: ನಿಮ್ಮ ಮತ್ತು ಅಹ್ಮದಿಯರ ಮಧ್ಯೆ ಇರುವ ವ್ಯತ್ಯಾಸ ಇದೇ ಆಗಿದೆ. ನೀವು ಇಲ್ಲಿಗೆ ಬಂದಾಗ ಕಾಫಿರರ ಬಗ್ಗೆ ಹೊರತು ಬೇರೇನೂ ಹೇಳಲಿಲ್ಲ. ಆದರೆ ಅಹ್ಮದಿಯರು ಇಲ್ಲಿ ಇದ್ದ ಸಮಯದಲ್ಲೆಲ್ಲಾ ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ಬಗ್ಗೆ ಹೊರತು ಬೇರೇನೂ ಮಾತಾಡುತ್ತಿರಲಿಲ್ಲ. ಅಹ್ಮದಿಯರ ಈ ಕೆಲಸ ಕುಫ್ರ್ ಆಗಿದ್ದರೆ ನಮಗೆ ಅವರ ಕುಫ್ರ್ ಪ್ರಿಯಕರವಾಗಿದೆ ಎಂದು ಹೇಳಿದರು. ನಂತರ ಅಲ್ಲಿನ ಜನರು ಬೈಅತ್ ಮಾಡಿದರು. ಈಗ ಅಲ್ಲಿ ಬಹಳ ದೊಡ್ಡ ಒಂದು ಜಮಾಅತ್ ಅಲ್ಲಾಹನ ಅನುಗ್ರಹದಿಂದ ಸ್ಥಾಪಿತವಾಗಿದೆ.

ಟಾಂಝಾನಿಯಾ ದೇಶದ ಟಬೋರದ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ: ಇಲ್ಲಿ ಒಂದು ದೊಡ್ಡ ಹೊಸ ಜಮಾಅತ್ ಸ್ಥಾಪಿತವಾಯಿತು. ಈ ಸ್ಥಳ ಟಬೋರದಿಂದ ಮೂವತ್ತೈದು ಕಿಲೋಮೀಟರ್ ದೂರವಿದೆ. ಸುಲೈಮಾನ್ ಜುಮುಅ ಸಾಹಿಬ್ ಎಂಬ ಅಹ್ಮದಿಯ ಮೂಲಕ ಇಲ್ಲಿ ಜಮಾಅತ್ ಪ್ರಾರಂಭವಾಯಿತು. ಅವರು ಅಲ್ಲಿಗೆ ಹೋಗಿ ತಬ್ಲೀಗ್ ಮಾಡುತ್ತಾ ಕಿರುಲೇಖನಗಳನ್ನು ಹಂಚುತ್ತಿದ್ದರು. ಅಲ್ಲಿ ಮೊದಲು ಕೆಲವರು ಬೈಅತ್ ಮಾಡಿದರು. ಅನಂತರ ಅಲ್ಲಿಗೆ ನಮ್ಮ ಜಮಾಅತಿನ ಮುಅಲ್ಲಿಮ್ ಸಾಹೇಬರು ಪದೇ ಪದೇ ಭೇಟಿ ನೀಡುತ್ತಾ ತಬ್ಲೀಗ್ ಮಾಡಿದ ಫಲವಾಗಿ ಇನ್ನಷ್ಟು ಜನರು ಬೈಅತ್ ಮಾಡಿದರು. ಅಲ್ಲಾಹನ ಅನುಗ್ರಹದಿಂದ ಈಗ ಅಲ್ಲಿ ಅಹ್ಮದಿಯರ ಸಂಖ್ಯೆ ವರ್ಧಿಸುತ್ತಾ ಹೋಗುತ್ತಿದೆ. ಅವರು ಬಡಜನರಾಗಿದ್ದರೂ ಸತ್ಯವಿಶ್ವಾಸದಿಂದ

ಭರಿತರಾಗಿದ್ದಾರೆ. ಅವರು ಸ್ವತಃ ಒಂದು ಕಚ್ಚಾ ಮಸ್‌ಜಿದ್ ನಿರ್ಮಿಸಿದ್ದಾರೆ. ಅವರು ಚಂದದ ವ್ಯವಸ್ಥೆಯಲ್ಲೂ ಸೇರಿದ್ದಾರೆ.

ಮಾಲಿ ದೇಶದ ಅಮೀರ್ ಸಾಹೇಬರು ಬರೆಯುತ್ತಾರೆ: "ತೇಜಾನಿಯಾ ಪಂಗಡದ ಒಬ್ಬ ದೊಡ್ಡ ಇಮಾಮ್ ಆದಮ್ ತಿನ್‌ಕಾರಾ ಸಾಹಿಬ್ ಎಂಬವರು ಬೈಅತ್ ಮಾಡಿದ್ದಾರೆ. ಬೈಅತ್ ಮಾಡುವಾಗ ಅವರು 'ನಾನು ದೀರ್ಘಕಾಲದಿಂದ ಅಹ್ಮದಿಯಾ ಜಮಾಅತಿನ ಕಾಸೆಟ್ಸ್ ಮತ್ತು ರೇಡಿಯೋ ಪ್ರಸಾರ ಆಲಿಸುತ್ತಿದ್ದೆ' ಎಂದು ಹೇಳಿದರು. (ಅಲ್ಲಾಹನ ಅನುಗ್ರಹದಿಂದ ಮಾಲಿದೇಶದಲ್ಲಿ ನಮ್ಮ ಅನೇಕ ಎಫ್.ಎಮ್. ರೇಡಿಯೋ ಸ್ಟೇಷನ್‌ಗಳಿವೆ. ಅವುಗಳ ಪ್ರಸಾರ ಪ್ರದೇಶ ಎಪ್ಪತ್ತು ಎಂಭತ್ತು ಮೈಲುಗಳಷ್ಟು ವಿಸ್ತಾರವಾಗಿದೆ. ಅಲ್ಲಾಹನ ಅನುಗ್ರಹದಿಂದ ವಿಶಾಲ ಪ್ರದೇಶದಲ್ಲಿ ತಬ್ಲೀಗ್ ಹರಡಿದೆ.) ಅವರ ತೀರಿಹೋದ ಪಿತ ಆದಮ್ ಸಾಹೇಬರು ತೇಜಾನಿಯಾ ಪಂಗಡದ ಬಹಳ ದೊಡ್ಡ ಇಮಾಮ್ ಆಗಿದ್ದರು. ಅವರು ತೊಂಬತ್ತಮೂರು ಬಹುದೇವಾರಾಧಕ ಗ್ರಾಮಗಳನ್ನು ಮುಸ್ಲಿಮರದ್ದನ್ನಾಗಿ ಮಾಡಿದ್ದರು. ಈ ಆದಮ್ ಸಾಹೇಬರು ಕನಸಿನಲ್ಲಿ ತನ್ನ ಮಗನೊಂದಿಗೆ ಹೇಳಿದರು: 'ಅಹ್ಮದಿಯ್ಯತ್ ಸತ್ಯಮಾರ್ಗವಾಗಿದೆ. ಆದುದರಿಂದ ನೀನು ಅಹ್ಮದಿಯಾ ಸಂದೇಶ ತಲಪಿಸಲು ಪ್ರಯತ್ನಿಸು.' ಆದಮ್ ತಿನ್‌ಕಾರಾ ಸಾಹೇಬರು ನಮ್ಮ ಮುಅಲ್ಲಿಮರೊಂದಿಗೆ ಒಂದು ಗ್ರಾಮಕ್ಕೆ ಹೋದರು. ಆ ಗ್ರಾಮದ ಜನರು ಹಿಂದೆ ಬಹುದೇವಾರಾಧಕರಾಗಿದ್ದರು. ಆದಮ್ ತಿನ್‌ಕಾರಾ ಸಾಹೇಬರ ಪಿತ ಅವರನ್ನು ಮುಸ್ಲಿಮರನ್ನಾಗಿ ಮಾಡಿದ್ದರು. ಆ ಗ್ರಾಮದ ಇಮಾಮ್ ಎಂಬತ್ತಮೂರು ವರ್ಷ ಪ್ರಾಯದವರಾಗಿದ್ದು ಆದಮ್ ತಿನ್‌ಕಾರಾ ಸಾಹೇಬರ ಪಿತನ ಸ್ನೇಹಿತರಾಗಿದ್ದರು. ಅವರಿಗೆ ತಬ್ಲೀಗ್ ಮಾಡಲಾಯಿತು. ಅಲ್ಲಾಹನ ಅನುಗ್ರಹದಿಂದ ಅಲ್ಲಿ ಮೂರು ಸಾವಿರದ ನಾಲ್ಕುನೂರು ಬೈಅತ್‌ಗಳು ನಡೆದುವು."

ಮಾಲಿ ದೇಶದ ಜೀಮಾ ರೀಜನ್‌ನ ಮುಅಲ್ಲಿಮ್ ಸಾಹೇಬರು ಹೀಗೆ ಬರೆಯುತ್ತಾರೆ: "ನಮ್ಮ ಪ್ರದೇಶದ ಒಬ್ಬ ಅಹ್ಮದಿ ಅಬ್ದುಸ್ಸಲಾಮ್ ತರಾವಡೇ ಸಾಹೇಬರು ತಮ್ಮ ಸಮೀಪದ ಗ್ರಾಮಕ್ಕೆ ಹೋದಾಗ ಅಲ್ಲಿನ ಜನರು ಅವರೊಂದಿಗೆ ಹೇಳಿದರು: ದೀರ್ಘಕಾಲದಿಂದ ಇಲ್ಲಿ ಮಳೆಯಾಗಿಲ್ಲ. ನಿಮ್ಮ ಜಮಾಅತ್ ಸತ್ಯವಾಗಿದ್ದರೆ ನೀವು ಮಳೆಗೋಸ್ಕರ ಪ್ರಾರ್ಥಿಸಿರಿ ಎಂದು. ಆಗ ಅವರು ಹೀಗೆ ಪ್ರಾರ್ಥಿಸಿದರು: 'ಓ ಅಲ್ಲಾಹ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಯ ದೃಷ್ಟಾಂತವನ್ನು ತೋರಿಸು.'

ಈ ಪ್ರಾರ್ಥನೆಯ ನಂತರ ಅಲ್ಲಿ ಮೊಡಗಳು ಜಮಾಯಿಸಿ ಮಳೆ ಸುರಿಯಲು ಪ್ರಾರಂಭವಾಯಿತು. ಎಲ್ಲ ಕಡೆಗಳಲ್ಲೂ ನೀರು ತುಂಬಿತು. ಸ್ವಲ್ಪ ಸಮಯದ ನಂತರ ಜನರು ಅಬ್ದುಸ್ಸಲಾಮ್ ಸಾಹೇಬರ ಸಮೀಪ ಬಂದು ಹೇಳಿದರು: ಅಹ್ಮದಿಯಾ ಜಮಾಅತ್ ಸತ್ಯ ಜಮಾಅತ್, ದೈವಿಕ ಜಮಾಅತ್ ಎಂದು ನಮಗೆ ಮನವರಿಕೆ ಆಗಿದೆ ಎಂದು. ನಂತರ ಆ ಊರಿನ ಎಲ್ಲರೂ ಬೈಅತ್ ಮಾಡಿ ಅಹ್ಮದಿಯರಾದರು."

ಘಾನಾ ದೇಶದಲ್ಲಿ ಇತ್ತೀಚೆಗೆ ನಿಧನಗೊಂಡ ನಮ್ಮ ಮುಬಲ್ಲಿಗರೊಬ್ಬರು ಒಂದು ಘಟನೆ ಹೀಗೆ ವಿವರಿಸಿದ್ದಾರೆ: ನಮ್ಮ ಮುಬಲ್ಲಿಗ್ ಅಬ್ದುಲ್ಲಾ ಎಂಬವರು ಲಾಂಬುವಾ ಎಂಬ ಊರಿಗೆ ಹೋದಾಗ ಅಲ್ಲಿನ ಜನರು ಮಳೆಗೋಸ್ಕರ ಪ್ರಾರ್ಥಿಸಲು ಅವರೊಡನೆ ಹೇಳಿದರು. ಆಗ ಮುಬಲ್ಲಿಗ್ ಸಾಹೇಬರು ಹೇಳಿದರು: ನಾನು ಇಮಾಮ್ ಮಹ್‌ದಿಯವರ ಸಂದೇಶ ತಲಪಿಸಲು ತಬ್ಲೀಗ್ ಮಾಡುತ್ತಿದ್ದೇನೆ. ಆದುದರಿಂದ ನನ್ನ ಪ್ರಾರ್ಥನೆ ಅಲ್ಲಾಹನು ಅಂಗೀಕರಿಸುವನು. ರಾತ್ರಿ ಮಳೆ ಉಂಟಾಗುವುದು. ಎಂದು ಹೇಳಿದರು. ಅಲ್ಲಾಹನ ಅನುಗ್ರಹದಿಂದ ಅದೇ ರಾತ್ರಿ ಒಂದು ಗಂಟೆಯ ಸಮಯದಲ್ಲಿ ಆ ಪ್ರದೇಶದಲ್ಲಿ ಧಾರಾಕಾರವಾಗಿ ಮಳೆ ಸುರಿಯಿತು. ಪ್ರಾರ್ಥನೆಯ ಅಂಗೀಕಾರದ ಈ ದೃಷ್ಟಾಂತ ನೋಡಿ ಆ ಪ್ರದೇಶದ ಬಹಳ ಸಂಖ್ಯೆಯ ಜನರು ಬೈಅತ್ ಮಾಡುವ ಭಾಗ್ಯ ಗಳಿಸಿದರು.

ಐವರಿಕೋಸ್ಟ್ ದೇಶದ ಅಮೀರ್ ಸಾಹೇಬರು ಬರೆಯುತ್ತಾರೆ: "ಹೊಸದಾಗಿ ಬೈಅತ್ ಮಾಡಿದ ಫಾತಿಮ ಸಾಹೇಬ ಹೇಳುತ್ತಾರೆ– ಬೈಅತ್ ಮಾಡಿದ ನಂತರ ನನಗೆ ಬಹಳ ಆತ್ಮ ಸಂತೃಪ್ತಿ ದೊರೆತಿದೆ ಎಂದು. ಅಹ್ಮದಿಯತ್ ನನಗೆ ನೈಜ ಇಸ್ಲಾಮ್ ಕಲಿಸಿದೆ. ನಾನು ಪ್ರತಿಜ್ಞೆ ಮಾಡುತ್ತೇನೆ ನಾನು ಮೃತಳಾಗುವ ತನಕ ಅಹ್ಮದಿಯ್ಯತ್‌ನಲ್ಲಿ ಸ್ಥಿರವಾಗಿ ನಿಲ್ಲುವೆನು ಎಂದು ಅವರು ಹೇಳುತ್ತಾರೆ."

ಐವರಿಕೋಸ್ಟ್ ದೇಶದ ಒಬ್ಬ ಹೊಸ ಅಹ್ಮದಿ ತೂರೇ ಅಲ್‌ವಲಿ ಸಾಹೇಬರು ಬರೆಯುತ್ತಾರೆ: "ಬೈಅತ್ ಮಾಡಿದ ನಂತರ ನನ್ನ ಆಧ್ಯಾತ್ಮಿಕ ಸ್ಥಿತಿ ಉತ್ತಮಗೊಂಡಿತು. ನಮಾಝ್‌ನಲ್ಲಿ ಆಸಕ್ತಿ ಮತ್ತು ಆತ್ಮ ಸಂತೃಪ್ತಿ ತಲೆದೋರಿದೆ. ಅನುಷ್ಠಾನಕರ್ಮಗಳು ಉತ್ತಮಗೊಂಡಿವೆ. ನೈಜ ಇಸ್ಲಾಮ್ ಪ್ರಕಾರ ವರ್ತಿಸುವುದು ಸುಲಭವಾಯಿತು. ನನ್ನ ಜ್ಞಾನವು ವರ್ಧಿಸಿದೆ" ಎಂದು ಬರೆದಿದ್ದಾರೆ.

ಗಿನಿ ಕನಾಕರಿ ದೇಶದ ಮುಬಲ್ಲಿಗ್ ಇನ್‌ಚಾರ್ಜ್ ಬರೆಯುತ್ತಾರೆ: "ಸಿಲ ಸಾಹಿಬ್ ಎಂಬ ವ್ಯಕ್ತಿ ನಮ್ಮ ಮಿಶನ್ ಹೌಸ್‌ಗೆ ಬಂದು ತನ್ನ ಊರಿನಲ್ಲಿ ಮಸ್‌ಜಿದ್ ನಿರ್ಮಿಸಲು ಅಹ್ಮದಿಯಾ ಜಮಾಅತಿನ ಸಹಾಯವನ್ನು ಕೋರಿದರು. ನಾನು ಆ ವ್ಯಕ್ತಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಬಗ್ಗೆ ದೀರ್ಘ ಸಮಯದ ತನಕ ವಿವರಿಸಿ ಕೊಟ್ಟೆನು. ಆ ವ್ಯಕ್ತಿಗೆ ನನ್ನ ಮಾತು ಆಲಿಸಿ ಸಂತೋಷವಾಯಿತು. ಅವರು ಹೇಳಿದರು: ನೀವು ನನ್ನ ಕಣ್ಣು ತೆರೆಸಿದಿರಿ. ನೀವು ನಮ್ಮ ಗ್ರಾಮಕ್ಕೆ ಬಂದು ಈ ಸಂದೇಶ ಎಲ್ಲರಿಗೂ ತಲಪಿಸಿರಿ ಎಂದು ಹೇಳಿದರು. ನಂತರ ಒಂದು ನಿರ್ದಿಷ್ಟ ಕಾರ್ಯಕ್ರಮ ರೂಪಿಸಿ ಆ ಗ್ರಾಮಕ್ಕೆ ಹೋಗಿ ತಬ್ಲೀಗ್ ಮಾಡಲಾಯಿತು. ಅಲ್ಲಾಹನ ಅನುಗ್ರಹದಿಂದ ಆ ಊರಿನ ಜನರು ಮತ್ತು ಸಮೀಪದ ಐದು ಗ್ರಾಮಗಳ ಜನರು ಬೈಅತ್ ಮಾಡಿ ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸಿದರು."

ಕಾಂಗೋ ದೇಶದ ಒಬ್ಬ ಕ್ರೈಸ್ತ ಪಾದರಿ ಅಹ್ಮದಿಯರಾಗಿದ್ದಾರೆ. ಅವರಲ್ಲಿ ಬಹಳ ಸ್ಪಷ್ಟ ಬದಲಾವಣೆ ಉಂಟಾಗಿದೆ. ಅವರು ಹೇಳುತ್ತಾರೆ: "ನಾನು ಅನೇಕ ವರ್ಷಗಳಿಂದ ಪಾದರಿಯಾಗಿ ಕೆಲಸ ಮಾಡಿದ್ದೇನೆ. ಜನರಿಗೆ

ಧಾರ್ಮಿಕ ಶಿಕ್ಷಣ ನೀಡಿದ್ದೇನೆ. ಆದರೆ ಹೃದಯಕ್ಕೆ ಸಾಂತ್ವನ ಮತ್ತು ಅಲ್ಲಾಹನ ಸಾಮೀಪ್ಯ ಗಳಿಸುವ ಭಾವನೆ ಅಹ್ಮದಿಯ್ಯತ್ ಮೂಲಕ ದೊರಕಿದೆ. ಇಂತಹ ತೃಪ್ತಿ ಹಿಂದೆಂದೂ ನನಗೆ ದೊರಕಲಿಲ್ಲ. ಈಗ ನನ್ನ ಸರ್ವಸ್ವವೂ ಅಹ್ಮದಿಯ್ಯತ್ ಆಗಿದೆ."

ಅಲ್‌ಜೀರಿಯಾ ದೇಶದ ಒಬ್ಬ ಅಹ್ಮದಿ ತನ್ನ ಕುಟುಂಬ ಅಹ್ಮದಿಯ್ಯತ್‌ನಲ್ಲಿ ಪ್ರವೇಶಿಸಿದ ಬಗ್ಗೆ ಹೀಗೆ ವಿವರಿಸುತ್ತಾರೆ. ಅವರ ತಾಯಿ ಸ್ವಪ್ನದಲ್ಲಿ ಒಬ್ಬ ಶೇಖ್ ಸಾಹೇಬರು ಅವರ ಮನೆಗೆ ಬಂದು ಅವರ ಮಕ್ಕಳಿಗೆ ಉತ್ತಮ ಉಪದೇಶ ನೀಡುತ್ತಿರುವುದಾಗಿ ಕಂಡರು. ಮನೆಯವರಲ್ಲಿ ಉತ್ತಮ ಪ್ರಭಾವ ಉಂಟಾಯಿತು. ಮನೆಯ ಜನರು ಆ ಹಿರಿಯ ವ್ಯಕ್ತಿಯನ್ನು ಆದರಭಾವದಿಂದ ಕಂಡರು. ಅವರ ತಾಯಿ ಹೇಳುತ್ತಾರೆ: ಒಮ್ಮೆ ನನ್ನ ಮಗಳು ಟಿ.ವಿ. ಚ್ಯಾನಲ್‌ಗಳನ್ನು ಬದಲಾಯಿಸುತ್ತಾ ಇದ್ದಾಗ ಆಕಸ್ಮಿಕವಾಗಿ ಎಂ.ಟಿ.ಎ. ಚ್ಯಾನಲ್ ತಲಪಿದಾಗ ನಿಲ್ಲಿಸಿದಳು. ಆಗ ಅಲ್ಲಿ ನನ್ನ (ಎಂದರೆ ಖಲೀಫತುಲ್ ಮಸೀಹರ) ಚಿತ್ರ ಕಾಣಿಸುತ್ತಿತ್ತು. ಆಗ ಆ ಅಹ್ಮದಿಯ ತಾಯಿ ಹೇಳಿದರು: ಈ ಚಿತ್ರ ನಾನು ಕನಸಿನಲ್ಲಿ ಕಂಡ ಮಹಾನುಭಾವರ ಚಿತ್ರವೇ ಆಗಿದೆ. ಅನಂತರ ಅವರು ಎಂ.ಟಿ.ಎ. ನೋಡುತ್ತಾ ಇದ್ದರು. ಇಮಾಮ್ ಮಹ್‌ದಿ ಆಗಮಿಸಿರುವರೆಂದು ಅವರಿಗೆ ತಿಳಿಯಿತು. 2013ರಲ್ಲಿ ಅವರು ಬೈಅತ್ ಮಾಡಿ ಅಹ್ಮದಿಯಾ ಜಮಾಅತ್‌ಗೆ ಸೇರಿದರು.

ಗಿನಿ ಕನಾಕರಿ ಮುಬಲ್ಲಿಗ್ ಇನ್‌ಚಾರ್ಜ್ ಬರೆಯುತ್ತಾರೆ: "ಈ ದೇಶದ ರಾಜಧಾನಿಯಿಂದ ಇನ್ನೂರು ಕಿಲೋಮೀಟರ್ ದೂರ ಸೋಮಿಯೋ ಯಾವಿ ಎಂಬ ಒಂದು ಬಹಳ ದೊಡ್ಡ ಗ್ರಾಮ ಇದೆ. ಅಲ್ಲಾಹನ ಅನುಗ್ರಹದಿಂದ ಅಲ್ಲಿ ನಿರಂತರ ತಬ್ಲೀಗ್ ಮಾಡಿದ ಕಾರಣ ಈ ಗ್ರಾಮ ಮತ್ತು ಅಕ್ಕಪಕ್ಕದ ಬೇರೆ ಗ್ರಾಮಗಳು ಅಹ್ಮದಿಯಾ ಜಮಾಅತ್‌ಗೆ ಸೇರಿವೆ. ಅಲ್ಲಿ ಜಮಾಅತಿನ ಆಡಳಿತೆ ವ್ಯವಸ್ಥೆ ಸ್ಥಾಪಿಸಲು ನಾವು ಅಲ್ಲಿಗೆ ಹೋದೆವು. ಅಲ್ಲಿನ ಜಾಮಿಅ ಮಸ್‌ಜಿದ್‌ನ ಇಮಾಮ್ ಸಹ ಅಲ್ಲಿದ್ದರು. ಅವರು ಸಹ ಅಹ್ಮದಿಯರಾಗಿದ್ದರು. ನಾವು ಜಮಾಅತ್ ಆಡಳಿತೆ ವ್ಯವಸ್ಥೆ ಸ್ಥಾಪನೆ ಬಗ್ಗೆ ವಿವರಿಸಿದಾಗ ಆ ಗ್ರಾಮದ ಚೀಫ್ (ಮುಖ್ಯಸ್ಥ) ಹೇಳಿದರು: ನಮ್ಮ ಸಂಪತ್ತು ಮತ್ತು ಸಾಮಾಗ್ರಿಗಳು ಎಲ್ಲವೂ ನಿಮ್ಮ ಮುಂದಿವೆ. ಈ ದೊಡ್ಡ ಮಸ್‌ಜಿದ್ ಸಹ ನಿಮ್ಮದಾಗಿದೆ. ಇಡೀ ಗ್ರಾಮ ನಿಮ್ಮದೇ ಆಗಿದೆ. ನಾವು ಅಹ್ಮದಿಯ್ಯತ್ ಎಂದರೆ ನೈಜ ಇಸ್ಲಾಮ್ ಸ್ವೀಕರಿಸಿ ಅತ್ಯಂತ ಅಮೂಲ್ಯವಾದ ಅನುಗ್ರಹ ಪಡೆದಿದ್ದೇವೆ. ನಮ್ಮ ಕಣ್ಣುಗಳು ತೆರೆದಿವೆ. ನಮಗೆ ನೈಜ ಇಸ್ಲಾಮಿನ ಮುಖ ಕಾಣಿಸಿದೆ."

ಹಾಫಿಝ್ ಮುಹಮ್ಮದ್ ಸಾಹೇಬ್ ಇಟಲಿಯಲ್ಲಿ ವಾಸಿಸುತ್ತಾರೆ. ಕಬಾಬೀರ್‌ನಿಂದ ಬಿತ್ತರಿಸಲ್ಪಡುವ ಎಂ.ಟಿ.ಎ. ಅರಬಿ ಕಾರ್ಯಕ್ರಮ ಅವರು ನೋಡುತ್ತಾ ಇದ್ದರು. ಅವರು ಹೇಳುತ್ತಾರೆ: "ಆರು ತಿಂಗಳ ಹಿಂದೆ ನಾನು ಹೃದಯದಲ್ಲಿ ಬೈಅತ್ ಮಾಡಿದ್ದೇನೆ. ಆದರೆ ಬೈಅತ್ ಫಾರ್ಮ್ ಭರ್ತಿಮಾಡಿ ಕಳುಹಿಸಲಿಲ್ಲ. ನಾನು ಒಬ್ಬಂಟಿಗನಾಗಿ ಜೀವಿಸುತ್ತಿದ್ದೇನೆ. ಸತ್ಯವನ್ನು ಗುರುತಿಸಲು ಸಾಧ್ಯವಾದ ಕಾರಣ ನನಗೆ ಬಹಳ ಸಂತೋಷವಾಗಿದೆ. ಇಮಾಮ್ ಮಹ್‌ದಿ ಅಲೈಹಿಸ್ಸಲಾಮರ ಸತ್ಯತೆಗೆ ನಾನು ಸ್ವತಃ ಸಾಕ್ಷ್ಯವಾಗಿದ್ದೇನೆ. ಅದು ಹೇಗೆಂದರೆ 2008ರಲ್ಲಿ ನಾನು ಎಂ.ಟಿ.ಎ. ಮೊದಲನೆಯ ಸಲ ನೋಡಿದೆ. ಆಗ ಅದರಲ್ಲಿ ನಾಸಿಖ್ – ಮನ್‌ಸೂಖ್ ಬಗ್ಗೆ ಚರ್ಚೆ ನಡೆಯುತ್ತಿತ್ತು. ಆಗ ನನಗೆ ಅಹ್ಮದಿಯ್ಯತ್ ಬಗ್ಗೆ, ಇಮಾಮ್ ಮಹ್‌ದಿ ಅಲೈಹಿಸ್ಸಲಾಮ್ ಬಗ್ಗೆ ಏನೂ ತಿಳಿದಿರಲಿಲ್ಲ. ಕಾರ್ಯಕ್ರಮಗಳು ಉತ್ತಮವಾಗಿದ್ದ ಕಾರಣ ನೋಡುವುದನ್ನು ಮುಂದುವರಿಸಿದೆ. ಅನಂತರ ಸ್ವರ್ಗದ ವಾಸ್ತವಿಕತೆ ಬಗ್ಗೆ ಅರಬಿ ಕಾರ್ಯಕ್ರಮ ನೋಡಿದೆ. ಆ ಕಾರ್ಯಕ್ರಮದ ಮೂಲಕ ಅಹ್ಮದಿಯಾ ಜಮಾಅತಿನ ಸತ್ಯತೆಯನ್ನು ಗುರುತಿಸಿದೆ. ಹೀಗೆ ಮುಂದುವರಿಯಿತು. ಕೊನೆಗೆ 2013ರಲ್ಲಿ, ಈಸಾ ಅಲೈಹಿಸ್ಸಲಾಮ್ ಶಿಲುಬೆಯಲ್ಲಿ ಮೃತರಾದ ಬಗ್ಗೆ ಕಾರ್ಯಕ್ರಮ ವೀಕ್ಷಿಸಿದೆ. ನನಗೆ ಎಷ್ಟು ಸಮಾಧಾನವಾಯಿತೆಂದರೆ ಬೈಅತ್ ಮಾಡದಿರಲು ಅಸಾಧ್ಯವಾಯಿತು. ನಾನು ಈ ಕಾರ್ಯಕ್ರಮ ಮೂಲಕ ನನ್ನ ಬೈಅತ್ ಬಗ್ಗೆ ಪ್ರಕಟಿಸುತ್ತೇನೆ."

ಅಲ್‌ಜೀರಿಯಾ ದೇಶದ ಅಬ್ದುಲ್ ಹಕೀಮ್ ಸಾಹೇಬ್ ಹೇಳುತ್ತಾರೆ: 1990ರ ದಶಕದಲ್ಲಿ ನಾನು ಸಿವಿಲ್ ಡಿಫೆನ್ಸ್ ಸ್ಕ್ವಾಡ್‌ನಲ್ಲಿ ಸೇರಿದೆನು. ಏಕೆಂದರೆ ದೇಶದಲ್ಲಿ ಧಾರ್ಮಿಕ ಗುಂಪುಗಳು ಇಸ್ಲಾಮಿನ ಹೆಸರಲ್ಲಿ ಭೀಕರ ಕೃತ್ಯಗಳನ್ನು ಹಬ್ಬಿಸುತ್ತಿದ್ದರು. ಜನರನ್ನು ಕೊಂದು ಸಂಪತ್ತನ್ನು ಲೂಟಿ ಮಾಡುತ್ತಿದ್ದರು. (ಎಲ್ಲ ತೀವ್ರವಾದಿ ಗುಂಪುಗಳು ಇಸ್ಲಾಮಿನ ಹೆಸರಲ್ಲಿ ಇಂತಹ ಕೆಲಸಗಳನ್ನು ಮಾಡುತ್ತಾ ಇವೆ.) ಅವರು ಹೇಳುತ್ತಾರೆ: 'ನನ್ನ ಒಬ್ಬ ಹಳೆಯ ಸ್ನೇಹಿತ ಅಬ್ಬಾಸ್ ಸಾಹೇಬ್ ಅಹ್ಮದಿಯರಾಗಿದ್ದರು. ಆದರೆ ನನಗೆ ಅದು ತಿಳಿದಿರಲಿಲ್ಲ. ನಾವು ಒಮ್ಮೆ ಬೇಟಿಯಾದಾಗ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದೆವು. ಅವರು ಪವಿತ್ರ ಖುರ್‌ಆನಿನ ಎಂತಹ ವ್ಯಾಖ್ಯಾನ ನೀಡಿದರೆಂದರೆ ಅಂತಹ ವ್ಯಾಖ್ಯಾನ ನಾನು ಹಿಂದೆ ಎಂದೂ ಆಲಿಸಿರಲಿಲ್ಲ. ಆ ವ್ಯಾಖ್ಯಾನ ಬುದ್ಧಿಗೆ ಅನುಯೋಜ್ಯವಾಗಿತ್ತು ಮತ್ತು ಹೃದಯಕ್ಕೆ ಸಮಾಧಾನ ನೀಡುವುದಾಗಿತ್ತು. ನಾನು ಬೈಅತ್ ಫಾರ್ಮ್ ಭರ್ತಿಮಾಡಿ ಈ ಪ್ರಿಯ ಜಮಾಅತ್‌ಗೆ ಆಗಲೆ ಸೇರಿದೆ. ಕೆಲವು ದಿನಗಳ ನಂತರ ನಾನೊಂದು ಸ್ವಪ್ನ ಕಂಡೆನು. ನಾನು ಅಂಧಕಾರದಲ್ಲಿ ನಡೆಯುತ್ತಾ ಹೋಗುತ್ತಿದ್ದೆ. ಒಬ್ಬ ಹಿರಿಯ ಮನುಷ್ಯರನ್ನು ನಾನು ಕಂಡೆನು. ಅವರು ನನ್ನ ಕೈ ಹಿಡಿದು ನಡೆಸಿಕೊಂಡು ಹೋಗುತ್ತಿದ್ದರು. ನಾವು ಸಮುದ್ರದ ಕಿನಾರೆಗೆ ತಲಪಿದಾಗ ಅಲ್ಲೊಂದು ದೋಣಿ ಇತ್ತು. ಅದರ ಹತ್ತಿರ ಇನ್ನೊಬ್ಬರು ನಿಂತಿದ್ದು ಅವರು ನಮ್ಮನ್ನು ಪ್ರತೀಕ್ಷಿಸುತ್ತಾ ಇದ್ದಂತೆ ಕಾಣಿಸಿತು. ನಾವು ದೋಣಿಯನ್ನು ಹತ್ತಿದೆವು. ದೋಣಿ ಸಾಗಿತು. ನಾನು ಯೋಚಿಸಿದೆ ನನ್ನನ್ನು ಕರೆದು ಕೊಂಡು ಬಂದ ಈ ಜನರು ಯಾರಿರಬಹುದು ಎಂದು. ಆಗ ಅವರು ಹೇಳಿದರು– ನಾನು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಎಂದು. ಇನ್ನೊಬ್ಬರು ಇಮಾಮ್ ಮಹ್‌ದಿ ಮತ್ತು ಮಸೀಹ್ ಮೌಊದ್ ಆಗಿರುವ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರು ಎಂದು ಹೇಳಿದರು. ಅನಂತರ ಈ ದೋಣಿ ಸಾಗುತ್ತಾ ಒಂದು ದೊಡ್ಡ ಹಡಗಿನ ಸಮೀಪ ತಲಪಿತು. ಆಗ ಆ ಇಬ್ಬರು ನನ್ನೊಂದಿಗೆ ಹೇಳಿದರು: ಈ ಹಡಗಿನ ಪ್ರಯಾಣಿಕರ ಜೊತೆಗೆ ಸೇರಿ ಕೊಳ್ಳಿರಿ. ಅವರು ನಿಮ್ಮ ವಾಸ್ತವಿಕ ಕುಟುಂಬಿಕರಾಗಿದ್ದಾರೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳು ಹೃದಯಗಳನ್ನು ಹೇಗೆ ಪ್ರಭಾವಿಸುತ್ತವೆ

ಎನ್ನುವುದನ್ನು ಸಹ ನೋಡಿರಿ. ಮೊರಾಕ್ಕೋ ದೇಶದ ಅಬ್ದುಲ್ ಅಝೀಝ್ ಸಾಹೇಬರು ಹೇಳುತ್ತಾರೆ: "ನಾನು ಚರಿತ್ರೆ ಮತ್ತು ಭೂಗೋಳ ಶಾಸ್ತ್ರದ ಅಧ್ಯಾಪಕನಾಗಿದ್ದೇನೆ. ನನಗೆ ಅಲ್ಲಾಹನು ಬಹಳ ಅನುಗ್ರಹ ನೀಡಿದ್ದಾನೆ. ನನಗೆ ಹುದ್ದೆಯಲ್ಲಿ ಭಡ್ತಿ ಸಹ ಲಭಿಸಿದೆ. ಸ್ವಂತ ಮನೆಯಿದೆ. ಆದರೆ ನಾನು ದುರ್ಮಾರ್ಗಿಯಾಗಿದ್ದೆ. ಆದರೆ ಅಲ್ಲಾಹನು ನನಗೆ ಬೈಅತ್ ಮಾಡುವ ಭಾಗ್ಯ ಅನುಗ್ರಹಿಸಿದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಓದಲು ಪ್ರಾರಂಭಿಸಿದಾಗ ಇದರಲ್ಲಿ ನನ್ನ ಗಾಯಗಳನ್ನು ಚಿಕಿತ್ಸೆ ಮಾಡುವ ಲೇಪನ ಇದೆ ಎಂದು ತಿಳಿಯಿತು. ನನ್ನ ಆತ್ಮಕ್ಕೆ ಔಷಧಿ ಇದರಲ್ಲಿದೆ ಎಂದು ತಿಳಿಯಿತು. ನನ್ನ ಆತ್ಮ ಶುದ್ಧಿಯ ಬಗ್ಗೆ ಕಾಳಜಿ ಉಂಟಾಯಿತು. ನಾನು ಇದರ ಬಗ್ಗೆ ಹುಝೂರರಿಗೆ ಬರೆಯಲು ಆಸಕ್ತಿ ಉಂಟಾಯಿತು. ಅಲ್ಲಾಹನು ನನ್ನನ್ನು **ಸಾದಿಖೀನ್**ಗಳಲ್ಲಿ ಸೇರಿಸುವಂತೆ ಮಾಡಲಿ ಎಂದು ಪ್ರಾರ್ಥಿಸಲಿಕ್ಕಾಗಿ ಅಪೇಕ್ಷಿಸುತ್ತಿದ್ದೇನೆ."

ನಮ್ಮ ಜಮಾಅತ್‌ನಲ್ಲಿ ಸಂಭವಿಸಿರುವ ಶಹಾದತ್‌ಗಳಿಗೆ ಪ್ರತಿಯಾಗಿ ಅಲ್ಲಾಹನು ಹೇಗೆ ಅನುಗ್ರಹ ನೀಡುತ್ತಾನೆಂದು ನೋಡಿರಿ.

ಜಪಾನಿನಿಂದ ನಮ್ಮ ಜಮಾಅತಿನ ಅಧ್ಯಕ್ಷರು ಬರೆಯುತ್ತಾರೆ: "ಶೇಖ್‌ಪುರದಲ್ಲಿ ಖಲೀಲ್ ಅಹ್ಮದ್ ಸಾಹೇಬರು ಶಹೀದರಾದ ಬಗ್ಗೆ ನಾನು ಖುತ್‌ಬದಲ್ಲಿ ಪ್ರಸ್ತಾಪಿಸಿದ್ದೆ. ಒಬ್ಬ ಜಪಾನಿ ಸ್ನೇಹಿತರಿಗೆ ಆರು ತಿಂಗಳಿಂದ ತಬ್ಲೀಗ್ ಜಾರಿಯಲ್ಲಿತ್ತು. ಅವರು ಈ ಶಾಹಾದತ್ ಬಗ್ಗೆ ತಿಳಿದ ಕೂಡಲೆ ಬೈಅತ್ ಮಾಡಿದರು. ಅವರು ಚಂದ ಕೊಡಲು ಪ್ರಾರಂಭಿಸಿದ್ದಾರೆ."

ಭಾರತದ ಯಾದ್‌ಗೀರ್‌ನ ಅಮೀರ್ ಸಾಹೇಬರು ಬರೆಯುತ್ತಾರೆ: "ಮಂಜುನಾಥ ಎಂಬವರು ಬಿ.ಎಸ್ಸಿ.ಯಲ್ಲಿ ಕಲಿಯುತ್ತಿದ್ದರು. ಅವರೊಂದಿಗೆ ನಮ್ಮ ಒಬ್ಬ ಯುವಕ ಸಹ ಕಲಿಯುತ್ತಿದ್ದನು ಅವರು ಒಮ್ಮೆ ನಮ್ಮ ಅಹ್ಮದಿ ಯುವಕನ ನೋಟ್ ಬುಕ್ಕನ್ನು ಪಡೆದುಕೊಂಡನು. ಆ ಪುಸ್ತಕದಲ್ಲಿ **ಇನ್‌ಸಾನಿಯ್ಯತ್ ಝಿಂದಾಬಾದ್** (ಮಾನವೀಯತೆ ಚಿರಕಾಲ ಬಾಳಲಿ) **ಮುಹಬ್ಬತ್ ಸಬ್‌ಕೆಲಿಯೇ ನಫ್ರತ್ ಕಿಸೀಸೆ ನಹೀಂ** (ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ) ಎಂಬ ಧ್ಯೇಯ ವಾಕ್ಯಗಳನ್ನು ಬರೆದಿರುವುದಾಗಿ ಕಂಡಿತು. ಅವರ ಹೃದಯದ ಮೇಲೆ ಪ್ರಭಾವ ಉಂಟಾಯಿತು. ಅಶಾಂತಿ ಹಬ್ಬಿದ ಈ ಕಾಲದಲ್ಲಿ ಇದಕ್ಕಿಂತ ಪ್ರಿಯಕರವಾದ ಸಂದೇಶ ಬೇರೆ ಇಲ್ಲ ಎಂದು ಅವರಿಗೆ ತೋಚಿತು. ಅವರು ನಮ್ಮ ಜಮಾಅತಿನ ಪುಸ್ತಕಗಳನ್ನು ಓದಲು ಪ್ರಾರಂಭಿಸಿದರು. ನಮ್ಮ ಜಮಾಅತ್ ಲೋಕದಲ್ಲಿ ಶಾಂತಿ ಸ್ಥಾಪಿಸಲು ಮತ್ತು ಮಾನವ ಸೇವೆಗೋಸ್ಕರ ಅತ್ಯಂತ ಹೆಚ್ಚು ಪ್ರಯತ್ನ ಮಾಡುತ್ತಿರುವ ಸುಸ್ಥಾಪಿತ ಸಂಘಟನೆ ಎಂದು ಅವರಿಗೆ ಮನವರಿಕೆಯಾಯಿತು. ಅವರು 2014 ಮಾರ್ಚ್ ತಿಂಗಳಲ್ಲಿ ಬೈಅತ್ ಮಾಡಿ ಜಮಾಅತ್‌ಗೆ ಸೇರಿದರು." ಅಹ್ಮದಿಯರು ಕೇವಲ ಘೋಷಣೆಗಳನ್ನು ಕೂಗಿದರೆ ಮಾತ್ರ ಸಾಕಾಗಲಾರದು. ಅವರ ಕೆಲಸ ಸಹ ಹೇಗಿರಬೇಕೆಂದರೆ ಅದು ತಬ್ಲೀಗ್ ಮಾಡುವಂತಿರಬೆಕು. ಇದರ ಬಗ್ಗೆ ಇದಕ್ಕೆ ಮೊದಲು ಸಹ ನಾನು ಹೇಳಿರುವೆನು. ನಾವು ಕೇವಲ ನಮ್ಮ ತತ್ವಗಳನ್ನು ಹೇಳಿದರೆ ಸಾಕಾಗಲಾರದು. ಜನರು ನಮ್ಮ ಕೆಲಸಗಳನ್ನು ನೋಡುತ್ತಿದ್ದಾರೆ. ಜನರು ನಮ್ಮ ಕೆಲಸಗಳಿಂದ ಪ್ರಭಾವಿತರಾಗುವರು. ಪ್ರತಿಯೊಬ್ಬ ಅಹ್ಮದಿಯ ಮೇಲೆ ಬಹಳ ದೊಡ್ಡ ಹೊಣೆಗಾರಿಕೆ ಹೊರಿಸಲ್ಪಟ್ಟಿದೆ.

ಈಜಿಪ್ಟ್‌ನಿಂದ ಮಹ್‌ಮೂದ್ ಸಾಹೇಬ್ ಎಂಬ ವ್ಯಕ್ತಿ ಬರೆಯುತ್ತಾರೆ: "ಅಲ್ಲಾಹನಾಣೆ ನೀವು ಸತ್ಯದಲ್ಲಿದ್ದೀರಿ. ಲೋಕದ ಜನರು ನಿಮ್ಮ ರೀತಿಗಳನ್ನು ಅನುಸರಿಸುತ್ತಿದ್ದರೆ ಎಷ್ಟು ಚೆನ್ನಾಗಿತ್ತು. **ಅಲ್‌ಹಮ್ದುಲಿಲ್ಲಾಹ್**, ನನ್ನ ತಂದೆಯವರು ಬೈಅತ್ ಮಾಡಿದ್ದಾರೆ. ನನ್ನ ಸಹೋದರ, ನನ್ನ ತಾಯಿ ಮತ್ತು ನಾನು ಸಹ ಬೈಅತ್ ಮಾಡಿದೆವು. ಈಗ ನನ್ನ ಕಸಿನ್, ನನ್ನ ತಂದೆಯವರ ಕಸಿನ್ ಸಹ ಬೈಅತ್ ಮಾಡಿದ್ದಾರೆ."

ನನಗೆ ದೊರೆತ ಅಸಂಖ್ಯಾತ ವರದಿಗಳಲ್ಲಿಂದ ಕೆಲವು ಮಾತ್ರ ಆಯ್ಕೆ ಮಾಡಿ ನಿಮ್ಮ ಮುಂದಿರಿಸಿದ್ದೇನೆ. ಇದರಿಂದ ಅಲ್ಲಾಹನು ಹೇಗೆ ದೃಷ್ಟಾಂತ ತೋರಿಸುತ್ತಾನೆ, ಸ್ವಪ್ನಗಳ ಮೂಲಕ ಹೇಗೆ ಮಾರ್ಗದರ್ಶನ ನೀಡುತ್ತಾನೆ ಎನ್ನುವುದು ತಿಳಿಯುತ್ತದೆ. ವಿರೋಧಿಗಳ ವಿರೋಧದ ವರ್ತನೆ ಸಹ ಸಜ್ಜನರ ಹೃದಯಗಳನ್ನು ಸತ್ಯದ ಕಡೆಗೆ ತಿರುಗಿಸುತ್ತಿದೆ. ಕ್ರೈಸ್ತ ಪಾದರಿ ಸಹ ಇಸ್ಲಾಮಿನ ಸತ್ಯತೆ ಗುರುತಿಸಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿ ಜನರು ತಮ್ಮ ಜ್ಞಾನವನ್ನು ವರ್ಧಿಸಿಕೊಳ್ಳುತ್ತಿದ್ದಾರೆ. ಅವರು ತಮ್ಮ ಕರ್ಮಗಳನ್ನು ಉತ್ತಮಗೊಳಿಸಲು ಪ್ರಯತ್ನ ಮಾಡುತ್ತಿದ್ದಾರೆ. ಏನು ಇವೆಲ್ಲವೂ ಕೇವಲ ಮನುಷ್ಯನ ಪ್ರಯತ್ನದ ಫಲವಾಗಿ ಉಂಟಾಯಿತೇ? ಇವೆಲ್ಲವೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ನೆರವಾಗಿ ಅಲ್ಲಾಹನು ಮಾಡುವ ಕೆಲಸಗಳಾಗಿವೆ. ಇವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ಸಾಕ್ಷ್ಯಗಳಾಗಿವೆ.

ಹೊಸದಾಗಿ ನಮ್ಮ ಜಮಾಅತಿಗೆ ಸೇರುವವರ ಸಂಭವಗಳನ್ನು ಆಲಿಸಿ ನಾವು ಅವರಿಗೋಸ್ಕರ ಮತ್ತು ನಮಗೋಸ್ಕರ ಪ್ರಾರ್ಥಿಸಬೇಕು. ನಮ್ಮ ವಿಶ್ವಾಸಗಳು ಅಭಿವೃದ್ಧಿ ಹೊಂದುತ್ತಾ ಇರಲಿ ಎಂದು ಸದಾ ಪ್ರಾರ್ಥಿಸುತ್ತಿರಬೇಕು. ಅಲ್ಲದೆ ನಾವು ಮುಸ್ಲಿಮ್ ಸಮುದಾಯಕ್ಕೋಸ್ಕರ ಸಹ ಪ್ರಾರ್ಥಿಸಬೇಕು. ಅಲ್ಲಾಹನು ಅವರಿಗೆ ವಿವೇಕವನ್ನು ದಯಪಾಲಿಸಲಿ. ಈ ಕಾಲಘಟ್ಟದ ಇಮಾಮರನ್ನು ನಂಬಿ ಅವರು ತಮ್ಮ ಇಹಲೋಕದ ಸ್ಥಿತಿಯನ್ನೂ ಪರಲೋಕದ ಸ್ಥಿತಿಯನ್ನೂ ಸರಿಪಡಿಸುವವರಾಗಲಿ. ಮುಸ್ಲಿಮ್ ಸಮುದಾಯದ ಇಂದಿನ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಜನರ ನಾಯಕರು ಜನರ ಮೇಲೆ ದೌರ್ಜನ್ಯ ಮಾಡುತ್ತಿದ್ದಾರೆ. ಜನರು ತಮಗೆ ನ್ಯಾಯ ಸಿಗದ ಕಾರಣ ಮತ್ತು ಸರಿಯಾದ ಮಾರ್ಗದರ್ಶನ ಲಭಿಸದ ಕಾರಣ ಅವರು ತಮ್ಮ ನಾಯಕರ ವಿರುದ್ಧವೇ ಹೋರಾಡುತ್ತಿದ್ದಾರೆ. ಪ್ರತಿಯೊಬ್ಬ ಸ್ವಾರ್ಥಸಾಧಕನೂ ನಾಯಕನ ವೇಷ ಧರಿಸಿ ತನ್ನ ಗುಂಪನ್ನು ರಚಿಸುತ್ತಿದ್ದಾನೆ. ವಿವಿಧ ಪಂಗಡಗಳು ಒಬ್ಬರಿನ್ನೊಬ್ಬರ ಕೊರಳು ಕತ್ತರಿಸಲು ಪ್ರಯತ್ನ ನಿರತರಾಗಿದ್ದಾರೆ. ಅಲ್ಲಾಹನ ಅಂತಿಮ ಪ್ರವಾದಿಯನ್ನು ನಂಬುವವರಲ್ಲಿ ಇಷ್ಟೆಲ್ಲ ಕಲಹ ಗೊಂದಲಗಳು ಏಕೆ ಉಂಟಾಗುತ್ತಿವೆ ಎಂದು ಸಹ ಅವರು ಯೋಚಿಸುವುದಿಲ್ಲ. ಅಭಿವೃದ್ಧಿಯ ಶಿಖರವನ್ನು ತಲಪಿದ ನಂತರ ಅಧಃಪತನದ

ಪಾತಾಳಕ್ಕೆ ಎಲ್ಲ ಮುಸ್ಲಿಮ್ ದೇಶಗಳು ಏಕೆ ಬೀಳುತ್ತಾ ಇವೆ ಎಂದು ಅವರು ಯೋಚಿಸುವುದಿಲ್ಲ. ಅಧಃಪತನದಿಂದ ರಕ್ಷಣೆ ಪಡೆಯಲು ಮತ್ತು ಅಭಿವೃದ್ಧಿಯ ಮಜಲುಗಳಲ್ಲಿ ಪುನಃ ಸಂಚರಿಸಲು ಇರುವ ಒಂದೇ ಒಂದು ಮಾರ್ಗವೆಂದರೆ, ಅದು ಅಲ್ಲಾಹನು ತೋರಿಸಿದ ಮಾರ್ಗವಾಗಿದೆ ಅಂತಿಮ ಕಾಲದ ಜನರನ್ನು ಮೊದಲಿನ ಕಾಲದ ಜನರೊಂದಿಗೆ ಸೇರಿಸುವ ಈ ಮಸೀಹ್ ಮೌಊದರನ್ನು ನಂಬಬೇಕು. ಮುಸ್ಲಿಮರು ಪಂಗಡಗಳಾಗಿ ವಿಭಜಿಸುವುದಕ್ಕೆ ಬದಲಾಗಿ ಒಂದೇ ಒಂದು ಸಮುದಾಯವಾಗಿ ಮಹ್‌ದೀ ಮಸೀಹರ ಕೈಯಲ್ಲಿ ಬೈಅತ್ ಮಾಡಿ ಜಮಾಯಿಸಬೇಕು. ಮುಸ್ಲಿಂ ಉಮ್ಮತ್‌ಗಾಗಿ ಪ್ರಾರ್ಥಿಸಲು ಅಲ್ಲಾಹನು ನಮಗೆ ಭಾಗ್ಯ ನೀಡುವವನಾಗಲಿ. ನಾವು ಬಹಳ ಪ್ರಾರ್ಥಿಸಬೇಕು. ಅಲ್ಲಾಹನು ನಮಗೆ ದುಆ ಮಾಡುವ ಭಾಗ್ಯ ನೀಡಲಿ. ನಮ್ಮ ಪ್ರಾರ್ಥನೆಗಳನ್ನು ಅವನು ಅಂಗೀಕರಿಸಲಿ.

ಜುಮುಅ ನಮಾಝ್ ನಂತರ ಒಂದು ನಮಾಝೆ ಜನಾಝ ಹಾಝಿರ್ ಇಂತಿಸಾರ್ ಅಹ್ಮದ್ ಅಯಾಝ್ ಸಾಹೇಬರದು. ಇನ್ನೊಂದು ನಮಾಝೆ ಜನಾಝ ಗಾಯಿಬ್ ವಸೀಮ್ ಅಹ್ಮದ್, ವಿದ್ಯಾರ್ಥಿ ಜಾಮಿಅ ಅಹ್ಮದಿಯಾ ಖಾದಿಯಾನ್. ಇವೆರಡು ನಮಾಝೆ ಜನಾಝ ಅನುಷ್ಠಿಸಲಾಯಿತು.

--------------*****-------------


***Friday Sermon delivered by Hadrath Khaleefatul Masih Al Khamis***[atba]

*at Masjid Baithul Futhuh, London on 03-04-2015.*

*Summarized by* Majlis Ansarullah Bharat

*Kannada Translation:* M. Ubeidullah *for* Kannada Desk, Qadian

*Reviewed by:* M. P. Ibrahim | *Typing:* U. Basheer Ahmad

*Published By:* Kannada Isha'at Team *for* Nazarath Nashr-O-Isha'ath, Qadian



*Email: khutuba.kannada@gmail.com*